## 8. ರಾಮ ಮಂದಿರಕ್ಕೆ ಮುಹೂರ್ತ

ಕೋಟ್ಯಂತರ ಹಿಂದೂಗಳ ಆರಾಧ್ಯ ದೈವ ಶ್ರೀರಾಮಚಂದ್ರನಿಗೆ ಆಯೋಧ್ಯೆಯಲ್ಲಿ ಭವ್ಯ ಮಂದಿರ ನಿರ್ಮಿಸುವ ದಶಕಗಳ ಕನಸು ಈಡೇರುವ ದಿನ ಸನ್ನಿಹಿತವಾಗಿದ್ದು, ಆಗಸ್ಟ್ 5 ರಂದು ಆಯೋಧ್ಯೆಯಲ್ಲಿ ಅದ್ದೂರಿ ಭೂಮಿ ಪೂಜೆ ಸಮಾರಂಭಕ್ಕೆ ಭರದ ಸಿದ್ಧತೆ ನಡೆದಿದೆ.

ಆಗಸ್ಟ್ 3 ರಿಂದ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿದ್ದು, ಪ್ರಮುಖ ಕಾರ್ಯಕ್ರಮ ಆಗಸ್ಟ್–5 ರಂದು ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಗರ್ಭಗುಡಿಯ ಸ್ಥಳದಲ್ಲಿ ಒಂದು ಬೆಳ್ಳಿ ಇಟ್ಟಿಗೆ ಇಟ್ಟು ಭೂಮಿ ಪೂಜೆ ನೆರವೇರಿಸಲಿದ್ದಾರೆ. ಒಟ್ಟು ಐದು ಬೆಳ್ಳಿ ಇಟ್ಟಿಗೆಗಳು ಇರಲಿವೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹೇಳಿದೆ. ಮೋದಿ ಅವರು ಪ್ರಧಾನಿಯಾದ ಬಳಿಕ ಆಯೋಧ್ಯೆಗೆ ಭೇಟಿ ನೀಡುತ್ತಿರುವುದು ಇದೇ ಮೊದಲು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಹಿರಿಯ ನಾಯಕರಾದ ಎಲ್.ಕೆ.ಆಡ್ವಾಣಿ, ಮುರುಳಿ ಮನೋಹರ ಜೋಶಿ. ಆರ್.ಎಸ್.ಎಸ್. ಮುಖ್ಯಸ್ಥ ಮೋಹನ್ ಭಾಗವತ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಸೇರಿ 50 ಗಣ್ಯರಿಗೆ ಆಹ್ವಾನ ನೀಡಲು ನಿರ್ಧರಿಸಲಾಗಿದೆ. ಕಾರ್ಯಕ್ರಮದಲ್ಲಿ 300 ಜನ ಭಾಗವಹಿಸುವ ನಿರೀಕ್ಷೆ ಇದೆ.

ಕಳೆದ ಮಾರ್ಚ್‌ನಲ್ಲಿ ಅಯೋಧ್ಯೆಗೆ ಭೇಟಿ ನೀಡಿದ್ದ ಉದ್ಧವ್ ಠಾಕ್ರೆ ಮಂದಿರ ನಿರ್ಮಾಣಕ್ಕೆ ರೂ.1 ಕೋಟಿ ದೇಣಿಗೆ ನೀಡುವ ಘೋಷಣೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಕೋವಿಡ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಹೆಚ್ಚಿನ ಜನರಿಗೆ ಪಾಲ್ಗೊಳ್ಳಲು ಟ್ರಸ್ಟ್ ಅವಕಾಶ ನೀಡಿಲ್ಲ. ಭೂಮಿ ಪೂಜೆ ಕಾರ್ಯಕ್ರಮದ ನೇರ ಪ್ರಸಾರವನ್ನು ಆಯೋಧ್ಯೆಯ ಜನರು ಸುಲಭವಾಗಿ ವೀಕ್ಷಿಸಲು ನಗರದಾದ್ಯಂತ ದೊಡ್ಡ ಎಲ್‌ಸಿಡಿ ಪರದೆಗಳನ್ನು ಅಳವಡಿಸಲಾಗುತ್ತಿದೆ.

**ಬೆಳ್ಳಿಯ ಐದು ಇಟ್ಟಿಗೆ** : ಭೂಮಿ ಪೂಜೆಗೂ ಎರಡು ದಿನಗಳ ಮುನ್ನ ಹಲವು ಧಾರ್ಮಿಕ ಕಾರ್ಯಕ್ರಮಗಳು ರಾಮಮಂದಿರ ನಿರ್ಮಾಣದ ಸ್ಥಳದಲ್ಲಿ ಜರುಗಲಿದೆ. ಭೂಮಿ ಶುದ್ಧೀಕರಣ, ಹೋಮ–ಹವನಗಳು ನಡೆಯಲಿದೆ. ವೇದ–ಮಂತ್ರ ಘೋಷಗಳ ನಡುವೆ ಆಗಸ್ಟ್ 5 ರಂದು ಮಧ್ಯಾಹ್ನ 12.15ರ ಅಭಿಜಿತ್ ಮಹೂರ್ತದಲ್ಲಿ ಬೆಳ್ಳಿಯ ಐದು ಇಟ್ಟಿಗೆಗಳನ್ನು ಭೂಮಿಯೊಳಗೆ (ಒಟ್ಟು 40 ಕೆ.ಜಿ. ತೂಕ) ಇರಿಸಿ ಭವ್ಯ ಮಂದಿರ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಈ ಐದು ರಚಿತ ಇಟ್ಟಿಗೆಗಳು ಪಂಚಭೂತಗಳ ಸೂಚಕವಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ನೃತ್ಯ ಗೋಪಾಲ್ ದಾಸ್ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

**ದೇವಸ್ಥಾನದ ವಿಸ್ತೀರ್ಣ ಹೆಚ್ಚಳ:** ವಿಶ್ವ ಹಿಂದೂ ಪರಿಷತ್ ಸೂಚಿಸಿದ್ದಂತಹ ನಾಗರ ಶೈಲಿಯ ವಾಸ್ತು ಶಿಲ್ಪದಂತೆ ವಿಷ್ಣು ಮಂದಿರಗಳು ನಿರ್ಮಾಣವಾಗುವ ರೀತಿಯಲ್ಲಿಯೇ ರಾಮಮಂದಿರ ತಲೆಯೆತ್ತಲಿದೆ. ಗರ್ಭಗುಡಿ ಎಂಟು ಮೂಲೆಗಳನ್ನು ಹೊಂದಿರಲಿದೆ. ಮಂದಿರದ ಒಟ್ಟು ವಿಸ್ತೀರ್ಣ ಈ ಹಿಂದೆ 38 ಸಾವಿರ ಚದರ ಅಡಿ ಆಸುಪಾಸು ಎಂದು ನಿಗದಿಯಾಗಿತ್ತು. ಪರಿಷ್ಕೃತ ಯೋಜನೆಯಲ್ಲಿ 76 ರಿಂದ 84 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಮಂದಿರ ನಿರ್ಮಾಣವಾಗಲಿದೆ.

ಆಧಾರ:ವಿಜಯಕರ್ನಾಟಕ, ದಿನಾಂಕ:20.07.2020